ಆ) ಹಾಗಿದ್ದಲ್ಲಿ ಈ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).— ಆ) ಬಂದಿದೆ.

ಆ) ಖಾಲಿ ಇರುವ ಹುದ್ದೆಯನ್ನು ತುಂಬಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ. ಅಕುಕ ೩೮೬ ಹೆಚ್‌ಎಸ್‌ಹೆಚ್ ೯೦ ದಿನಾಂಕ ೨೫-೫-೧೯೯೦.

ಶ್ರೀ ಕೆ. ಕುಶಾಲ,—ಮಾನ್ಯ ಸಭಾಧ್ಯಕ್ಷಣಿಯವರೇ, ಈ ವೈದ್ಯಾಧಿಕಾರಿಯವರ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಸಭಾಧ್ಯಕ್ಷಣಿಯವರೇ, ಈ ಹುದ್ದೆಗೆ ಪೋಸ್ಟಿಂಗ್ ಆಗಿದೆ.

ಶ್ರೀ ಕೆ. ಕುಶಾಲ.—ಮಾನ್ಯ ಸಭಾಧ್ಯಕ್ಷಣಿಯವರೇ, ವೈದ್ಯಾಧಿಕಾರಿಯವರ ಹುದ್ದೆಯನ್ನು ಭರ್ತಿ ಮಾಡಲಾಗಿದ್ದರೂ ಅವರು ಇನ್ನೂ ರಿಪೋರ್ಟ್ ಮಾಡಿಕೊಂಡಿಲ್ಲ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಮಾನ್ಯ ಸಚಿವರು ತಿಳಿಸಬೇಕು.....

(ಉತ್ತರ ಇಲ್ಲ)

ಉಪಾಧ್ಯಕ್ಷರು,—ಈ ಪ್ರಶ್ನೆ ಬಗ್ಗೆ ಸಾಕಷ್ಟು ಡಿಸ್ಕಷನ್ ಆಗಿದೆ. ಚೀಫ್ ಮಿನಿಸ್ಟರ್ ಇದರ ಬಗ್ಗೆ ನಿನ್ನೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ಚೀಫ್ ಮಿನಿಸ್ಟರ್ ಅವರು ಉತ್ತರ ಕೊಟ್ಟಿರುವುದನ್ನು ಬಿಟ್ಟು ಬೇರೆ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಹಾಗೂ ಪಶುಸಂಗೋಪನಾ ಸಚಿವರು).—ಮಾನ್ಯ ಸಭಾಧ್ಯಕ್ಷಣಿಯವರೇ, ನಾನು ಸ್ಪೀಕರ್‌ರವರಿಗೆ ನಿನ್ನೆ ಪತ್ರ ಬರೆದಿದ್ದೇನೆ. ಈ ಪ್ರಶ್ನೆಗೆ ಮಾನ್ಯಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಇದನ್ನು ತೆಗೆದು ಹಾಕಿ ಎಂದು ಪತ್ರ ಬರೆದಿದ್ದೇನೆ. ಆದರೂ ಇದು ಪ್ರಿಂಟ್ ಆಗಿದೆ.

ಶ್ರೀ ವಾಟಾಳ್ ನಾಗರಾಜ್.—ಇವೊತ್ತು ಇದು ಅಚ್ಚು ಆಗಿರುವುದರಿಂದ ನೀವು ಉತ್ತರ ಕೊಡ ಬೇಕಾಗುತ್ತದೆ,

ಉಪಾಧ್ಯಕ್ಷರು.—ನಿನ್ನೆ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರು ಉತ್ತರ ಕೊಟ್ಟರುವುದರಲ್ಲಿ ಏನಾದರೂ ವಿಷಯ ಬಿಟ್ಟಿದ್ದರೆ ಅದನ್ನು ತಾವು ಕೇಳಿ, ಉತ್ತರ ಕೊಡುತ್ತಾರೆ.

ಶ್ರೀ ಆರ್. ಎನ್. ನಾಯಕ್.—ನಿನ್ನೆ ಉತ್ತರ ಕೊಟ್ಟಿದ್ದರೆ ಈಗ ಈ ಪ್ರಶ್ನೆಯ ಅವಶ್ಯಕತೆ ಇಲ್ಲ. ನಿನ್ನೆ ನಾನು ಇರಲಿಲ್ಲ.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆ

೧೮೧೩. ಶ್ರೀ ಬಿ. ಹೆಚ್. ಬನ್ನಿಕೋಡ್‌ರವರ (ಹಿರೇಕೆರೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೯-೯೦ನೇ ಸಾಲಿನಲ್ಲಿ ಮಂಜೂರು ಮಾಡಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ೧೯೮೯-೯೦ನೇ ಸಾಲಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು)

ಇ) ರಾಜ್ಯದಲ್ಲಿ ಕೊರತೆ ಇರುವ ವೈದ್ಯರ ಸಂಖ್ಯೆ ಎಷ್ಟು? ಮತ್ತು ಯಾವಾಗ ಈ ಹುದ್ದೆಗಳನ್ನು ಭರ್ತಿಮಾಡಲಾಗುವುದು (ಜಿಲ್ಲಾವಾರು ವಿವರ ಒದಗಿಸುವುದು)

ಶ್ರೀಮತಿ ಮನೋರಮಾ ಮಧ್ವರಾಜ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೩೦

(ಅನುಬಂಧ-೨)ದಲ್ಲಿ ಜಿಲ್ಲಾವಾರು ಮಾಹಿತಿ ನೀಡಿದೆ)

ಆ) ಇಲ್ಲ.

೫) ಸಿಳಿಟ (ಪಟ್ಟಿಯನ್ನು ಲಗತ್ತಿಸಿದೆ) ಸದ್ಯದಲ್ಲೇ ಲೋಕಸೇವಾ ಆಯೋಗ ಮೂಲಕ ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು

ಅನುಬಂಧ- ಅ

೧೯೮೯-೯೦ನೇ ಸಾಲಿನಲ್ಲಿ ಮಂಜೂರು ಮಾಡಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ.

೧)	ಬೆಂಗಳೂರು (ನಗರ)	೬
೨)	ಬೆಂಗಳೂರು (ಗ್ರಾಮಾಂತರ)	೯
೩)	ಚಿತ್ರದುರ್ಗ	೧೬
೪)	ತುಮಕೂರು	೨೦
೫)	ಕೋಲಾರ	೧೫
೬)	ಶಿವಮೊಗ್ಗ	೧೫
೭)	ಬೆಳಗಾಂ	೩೮
೮)	ಬಿಜಾಪುರ	೧೬
೯)	ಉತ್ತರ ಕನ್ನಡ	೧೧
೧೦)	ಧಾರವಾಡ	೧೭
೧೧)	ಗುಲ್ಬರ್ಗಾ	೧೦
೧೨)	ಬಳ್ಳಾರಿ	೮
೧೩)	ರಾಯಚೂರು	೧೪
೧೪)	ಬೀದರ್	೬
೧೫)	ಮೈಸೂರು	೩೨
೧೬)	ಮಂಡ್ಯ	೧೩
೧೭)	ಚಿಕ್ಕಮಗಳೂರು	೬
೧೮)	ಹಾಸನ	೧೩
೧೯)	ದಕ್ಷಿಣಕನ್ನಡ	೩೩
೨೦)	ಕೊಡಗು	೮
		೩೦೬

CADRE STRENGTH OF HEALTH OFFICER-CUM-ASST.SURGEON

		Vacancy
1)	Bangalore (Rural)	11
2)	Bangalore (Urban)	3
3)	Tumkur	14
4)	Kolar	22
5)	Chitradurga	22
6)	Shimoga	20
		92
1)	Mysore	12
2	Mandya	13
3)	Hassan	33
4)	Mangalore	24
5)	Chickamagalur	15
6)	Kodagu	12
		109
1)	Gulbarga	17
2)	Raichur	18
3)	Bidar	18
4)	Bellary	29
		82
1)	Belgaum	19
2)	Dharwar	16
3)	Bijapur	8
4)	Karwar	20
		63
	Grand Total	346

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೆ, ೧೯೮೯-೯೦ನೇ ಸಾಲಿನಲ್ಲಿ ರಾಜ್ಯದಲ್ಲಿ ೩೦೬ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿರುವುದಾಗಿ ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಇದು ಪ್ರಚಾರಕ್ಕಾಗಿ ಮಾಡಿದಂಥ ಕೆಲಸವೊ ಅಥವಾ ಇದು ನಿಜವಾಗಿ ಜನರ ಒಂದು ಆರೋಗ್ಯದ ಹಿತದೃಷ್ಟಿಯಿಂದ ಮಾಡಿದಂಥ ಕೆಲಸವೋ ಎಂದು ನನಗೆ ತಿಳಿಯುತ್ತಾ ಇಲ್ಲ. ಏಕೆಂದರೆ ೩೦೬ ದವಾಖಾನೆಗಳನ್ನು ಪ್ರಾರಂಭ ಮಾಡಿದ್ದಾರೆ ೩೪೬ ವೈದ್ಯರು ರಾಜ್ಯದಲ್ಲಿ ಕಡಿಮೆ ಇದ್ದಾರೆ ಎಂದು ಇನ್ನೊಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ವೈದ್ಯರಿಲ್ಲದೆ ದವಾಖಾನೆಗಳು ದೇವರಿಲ್ಲದ ದೇಗುಲಗಳಾಗಿವೆ, ಶಿಕ್ಷಕರಿಲ್ಲದ ಶಾಲೆಗಳನ್ನು ಪ್ರಾರಂಭಿಸಿದಂತಾಗಿದೆ. ವೈದ್ಯರಿಲ್ಲದೆ ದವಾಖಾನೆಗಳನ್ನು ಪ್ರಾರಂಭಿಸಿದ್ದಾರೆ. ಆದ್ದರಿಂದ ಇದು ಸರ್ಕಾರದ ಪ್ರಚಾರಕ್ಕಾಗಿ ಮಾಡಿದಂಥ ಕೆಲಸವೋ ಅಥವಾ ನಿಜವಾಗಿ ಜನರ ಒಂದು ಸೇವೆಗಾಗಿ ಕಳಕಳಿಯಿಂದ ಮಾಡಿದಂಥ ಕೆಲಸವೋ ದಯವಿಟ್ಟು ಯಾವಾಗ ವೈದ್ಯರುಗಳ ಹುದ್ದೆಗಳನ್ನು ಭರ್ತಿಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಒಂದು ನಿಗದಿತ ವೇಳೆಯಲ್ಲಿ ಆದಷ್ಟು ತೀವ್ರವಾಗಿ ಈ ಕೆಲಸ ಮಾಡುತ್ತೀರೊ ಅಥವಾ ಇದಕ್ಕೆ ಹಣಕಾಸಿನ ನಿರ್ಬಂಧ ವಿದೆಯೋ ಎನ್ನುವುದನ್ನು ತಿಳಿಸಬೇಕು.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಸಭಾಧ್ಯಕ್ಷರೆ, ಇದು ಆಡಂಬರಕ್ಕೋಸ್ಕರ ಮಾಡಿರತಕ್ಕಂಥಾದ್ದಲ್ಲ. ಜನರ ಒಂದು ಪ್ರಯೋಜನಕ್ಕಾಗಿ ೩೦೬ ಪ್ರಾಥಮಿಕ ಆರೋಗ್ಯ ಕೇಂದ್ರ ಗಳನ್ನು ಮಂಜೂರು ಮಾಡಲಾಗಿದೆ. ಇಲ್ಲಿ ವೈದ್ಯರುಗಳ ಹುದ್ದೆಗಳು ಖಾಲಿ ಇದೆ, ೩೪೬ ಹುದ್ದೆಗಳು ಖಾಲಿ ಇವೆ ಎಂದು ಕೊಟ್ಟಿದೆ. ಕಳೆದ ನಾಲ್ಕು ವರ್ಷಗಳಿಂದ ರಾಜ್ಯದಲ್ಲಿ ಎಕಾನಮಿ ಬ್ಯಾನ್ ಇದ್ದುದರಿಂದ ನಮಗೆ ನೇಮಕಾತಿಗಳನ್ನು ಮಾಡಲಿಕ್ಕೆ ಆಗಲಿಲ್ಲ. ಈಗಾಗಲೇ ಮಾನ್ಯ ಅರ್ಥಸಚಿವರು ಈ ಇಲಾಖೆಗೆ ಎಕಾನಮಿ ಬ್ಯಾನ್ ಲಿಫ್ಟ್ ಮಾಡಿರುವುದರಿಂದ ಸಧ್ಯದಲ್ಲೇ ಲೋಕಸೇವಾ ಆಯೋಗದ ಮೂಲಕ ರೆಕ್ರೂಟ್‌ಮೆಂಟ್ ಮಾಡಿಸಿ ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯರು ಗಳನ್ನು ನೇಮಕ ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಎಷ್ಟು ದಿವಸದಲ್ಲಿ ನೇಮಕ ಮಾಡುತ್ತೀರೆಂದು ದಯವಿಟ್ಟು ಹೇಳುತ್ತೀರಾ? ನಿಗದಿತ ವೇಳೆಯಲ್ಲಿ ಇದನ್ನು ದಯವಿಟ್ಟು ಮಾಡುತ್ತೀರಾ?

(ಉತ್ತರವಿಲ್ಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸಚಿವರು ಡಾಕ್ಟರ್ಸನ್ನು ರೆಕ್ರೂಟ್‌ಮೆಂಟ್ ಮಾಡಿ ಕೊಳ್ಳಲಿಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಎಕಾನಮಿ ಬ್ಯಾನನ್ನು ಲಿಫ್ಟ್ ಮಾಡಿದ್ದಾರೆ ಎಂದು ಹೇಳಿದರು. ಕಳೆದ ಸಾರಿ ಈ ಸದನ ನಡೆದಂಥ ಸಂದರ್ಭದಲ್ಲೂ ಸಹಿತ ಮಾನ್ಯ ಮುಖ್ಯ ಮಂತ್ರಿಗಳು ಇದೇ ಮಾತನ್ನು ಹೇಳಿದ್ದರು ಆರೋಗ್ಯ ಇಲಾಖೆಯಲ್ಲಿ ರೆಕ್ರೂಟ್‌ಮೆಂಟಿಗೆ ಇರತಕ್ಕಂಥ ಬ್ಯಾನನ್ನು ನಾವು ತೆಗೆಯುತ್ತೇವೆ ಎಂದು ಹೇಳಿದರು. ಆದುದರಿಂದ ಲೋಕಸೇವಾ ಆಯೋಗ ಸೆಲೆಕ್ಷನ್ ಮಾಡಲಿಕ್ಕೆ ಪ್ರೊಸೆಸ್ ಮಾಡಲಿಕ್ಕೆ ೫-೬ ತಿಂಗಳು ತೆಗೆದುಕೊಳ್ಳುತ್ತದೆ. ಆದುದರಿಂದ ಎಕಾನಮಿ ಬ್ಯಾನನ್ನು ಲಿಫ್ಟ್ ಮಾಡಿದ್ದೀರ ಎಂದು ನಾನು ಕೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಈ ಬಗ್ಗೆ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಂಡಿದ್ದೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಸಚಿವರು ನನಗೆ ಕೊಟ್ಟಂಥ ಉತ್ತರದಲ್ಲಿ ನೋಡಿದರೆ ಮಾನ್ಯ ಸಚಿವರ ಜಿಲ್ಲೆಯಲ್ಲೇ ೩೫ ಹುದ್ದೆಗಳು ಖಾಲಿ ಇವೆ. ರಾಜ್ಯದಲ್ಲಿ ಮೊದಲನೇ ಸ್ಥಾನ ನಿಮ್ಮ ಜಿಲ್ಲೆಗೇ ಹೋಗಬೇಕು. ಮಾನ್ಯ ಮಂತ್ರಿಗಳ ಜಿಲ್ಲೆಯಲ್ಲೇ ೩೫ ಹುದ್ದೆಗಳು ಖಾಲಿ ಇವೆ. ಎರಡನೆಯದು ಮಾನ್ಯ ಮಲ್ಲಾರಿಗೌಡ ಪಾಟೀಲರ ಕ್ಷೇತ್ರದಲ್ಲಿ ೩೮ ಖಾಲಿ ಹುದ್ದೆಗಳಿವೆ ಮಾನ್ಯ ಅರ್ಥ ಸಚಿವರ ಜಿಲ್ಲೆಯಲ್ಲಿ ೨೨ ಹುದ್ದೆಗಳು ಖಾಲಿ ಇವೆ. ಕಾನೂನಿನ ದೃಷ್ಟಿಯಿಂದ ಇವನ್ನು ಭರ್ತಿ ಮಾಡುವುದು ಲೇಟಾಗುತ್ತಿದೆ. ಈ ರೀತಿ ರಾಜ್ಯಾದ್ಯಂತ ಖಾಲಿ ಇರತಕ್ಕಂಥ ವೈದ್ಯರ ಜಾಗಗಳನ್ನು ಆದಷ್ಟು ತೀವ್ರವಾಗಿ ತುಂಬಲಿಕ್ಕೆ ತಾತ್ಕಾಲಿಕವಾಗಿ ವ್ಯವಸ್ಥೆ ಮಾಡಿದರೆ ಸೂಕ್ತವೆಂದು ನನ್ನ ಭಾವನೆ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಉಪಾಧ್ಯಕ್ಷರೆ, ನನ್ನ ಜಿಲ್ಲೆಯಲ್ಲಿ ಮತ್ತು ಮಾನ್ಯ ಅರ್ಥ ಸಚಿವರ ಜಿಲ್ಲೆಯಲ್ಲಿ ವೈದ್ಯರುಗಳ ಹುದ್ದೆಗಳು ಖಾಲಿ ಇವೆ ಎಂದು ಹೇಳಿದರು. ಆದರಲ್ಲೇ ತಾವು ತಿಳಿದುಕೊಳ್ಳಬಹುದು. ನಾವು ಸ್ವಾರ್ಥಿಗಳಲ್ಲ ಎಂದು. ಮೊದಲು ನಿಮ್ಮ ಜಾಗಗಳಿಗೆ ಭರ್ತಿಮಾಡಿ ನಂತರ ನಾವು ಪಡೆದುಕೊಳ್ಳುತ್ತೇವೆ.

ಮುಂದುವರಿದಿದೆ

ಶ್ರೀ ಬಿ. ಹೆಚ್. ಬನ್ನಿಕೋಡ್.—ನಿಮ್ಮ ಜಿಲ್ಲೆಯಲ್ಲೇ ವೈದ್ಯರು ಇಲ್ಲದೇ ಇರಬೇಕಾದರೆ ನೀವು ನಿಯೋಜಿತ ಮಾತ್ರ ಸಚಿವರಾದ ಹಾಗೆ ಆಗುತ್ತದೆ. ದಯವಿಟ್ಟು ಜಾಗ್ರತೆ ವೈದ್ಯರ ಹುದ್ದೆಗಳನ್ನು ತುಂಬುತ್ತೀರಾ?

(ಉತ್ತರವಿಲ್ಲ)

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ ೫-೬ ವರ್ಷಗಳಿಂದ ವೈದ್ಯರ ಹುದ್ದೆಗಳು ಖಾಲಿ ಇವೆ. ರಾಜ್ಯದಲ್ಲಿ ಸುಮಾರು ೫೦೦-೬೦೦ ಹುದ್ದೆಗಳು ಖಾಲಿ ಇವೆ. ಇವಕ್ಕೆ ಆಸ್ಪತ್ರೆಗಳಲ್ಲೂ ವೈದ್ಯರ ಹುದ್ದೆಗಳು ಖಾಲಿ ಇವೆ. ಇವತ್ತು ವೈದ್ಯರನ್ನು ನೇಮಕ ಮಾಡುವುದಕ್ಕೆ ಆಗುತ್ತಾ ಇಲ್ಲ. ಆದ್ದರಿಂದ ತಿಂಗಳು, ಎರಡು ತಿಂಗಳ ಮಟ್ಟಿಗೆ ಕಾಂಟ್ರಾಕ್ಟ್ ಆಧಾರದ ಮೇಲೆ ನೇಮಕಮಾಡಿ ಈ ಖಾಲಿ ಹುದ್ದೆಗಳನ್ನು ಭರ್ತಿಮಾಡುತ್ತೀರಾ?

೧೨. ೧೦ ಪಿ. ಎಂ.

ಶ್ರೀಮತಿ ಮನೋರಮಾ ಮಧ್ವರಾಜ್.—ಕಾಂಟ್ರಾಕ್ಟ್ ಆಧಾರದ ಮೇಲೆ ನೇಮಕ ಮಾಡಲಿಕ್ಕೆ ಆಗುವುದಿಲ್ಲ. ಆದಷ್ಟು ಬೇಗ ಖಾಲಿ ಇರತಕ್ಕ ಹುದ್ದೆಗಳನ್ನು ತುಂಬಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಆದಷ್ಟು ಬೇಗ ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಉತ್ತರ ಕನ್ನಡ ಜಿಲ್ಲೆಗೆ ವೈದ್ಯರುಗಳು ಬರುವುದು ಬಹಳ ಕಷ್ಟ. ಬಂದವರು ಕೂಡ ಆದಷ್ಟು ಬೇಗ ಹೊರಗಡೆ ಹೋಗಲಿಕ್ಕೆ ಪ್ರಯತ್ನ ಮಾಡುತ್ತಾರೆ. ನಾನು ಹಿಂದೆ ಮಂತ್ರಿಗಳಿಗೆ ಒಂದು ಪತ್ರ ಬರೆದು ಉತ್ತರ ಕನ್ನಡ ಜಿಲ್ಲೆಯಿಂದ ವೈದ್ಯರುಗಳನ್ನು ವರ್ಗ ಮಾಡಬೇಡಿ ಎಂದು ತಿಳಿಸಿದ್ದೆ. ಆದರೂ ಸಾಕಷ್ಟು ವೈದ್ಯರುಗಳನ್ನು ವರ್ಗ ಮಾಡಿದ್ದಾರೆ. ಎಲ್ಲಿಯವರೆಗೆ ಹೊಸದಾಗಿ ಡಾಕ್ಟರುಗಳನ್ನು ಪೋಸ್ಟ್ ಮಾಡುವುದಿಲ್ಲ, ಅಲ್ಲಿಯವರೆಗೆ ಅಲ್ಲಿರತಕ್ಕ ಡಾಕ್ಟರುಗಳನ್ನು ರಿಲೀವ್ ಮಾಡಬೇಡಿ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಉಪಾಧ್ಯಕ್ಷರೆ, ಇದು ಜಟಿಲವಾದ ಸಮಸ್ಯೆ. ಕೆಲವರು ರಿಲೀವ್ ಮಾಡಿ ಎಂದು ಹೇಳುತ್ತಾರೆ. ಕೆಲವರು ಪೋಸ್ಟ್ ಮಾಡಿ ಎಂದು ಹೇಳುತ್ತಾರೆ. ನಾನು ಅನಾವಶ್ಯಕವಾಗಿ ಬ್ಲೇಮುಗಳನ್ನು ಹೊರುವುದಕ್ಕೆ ಸಿದ್ಧಳಿಲ್ಲ. ಇದರಲ್ಲಿ ನನ್ನ ಸಂಬಂಧಿಕರು ಯಾರೂ ಇಲ್ಲ, ನನ್ನ ಜಾತಿಯವರು ಯಾರೂ ಇಲ್ಲ. ಮಾನ್ಯ ಸದಸ್ಯರುಗಳೆಲ್ಲರೂ ಸಹಕರಿಸಿದರೆ ಮಾತ್ರ ನಾನು ವೈದ್ಯರುಗಳನ್ನು ಎಲ್ಲ ಕಡೆಗೂ ಹಾಕುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ.—ನನಗೆ ಎ.ಬಿ.ಸಿ.ಡಿ. ಬಗ್ಗೆ ಇಂಟರೆಸ್ಟ್ ಇಲ್ಲ. ಖಾಲಿಯಿರತಕ್ಕ ಜಾಗಗಳನ್ನು ಭರ್ತಿ ಮಾಡಿ. ತಾವು ಟ್ರಾನ್ಸ್‌ಫರ್ ಮಾಡಿದರೆ ಮತ್ತೊಬ್ಬ ಡಾಕ್ಟರು ಬರುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ಆದಷ್ಟು ಬೇಗ ಪೋಸ್ಟ್ ಮಾಡಲಾಗುವುದು.

ಶ್ರೀ ಸಿ. ಬೈರೇಗೌಡ.—೧೯೮೯-೯೦ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ೧೫ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಯಿತು. ಉಳಿಕೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿಲ್ಲ, ಈ ವರ್ಷ ಆ ಒಂದು ಕೆಲಸವನ್ನು ಮಾಡುತ್ತೀರಾ?

ಶ್ರೀಮತಿ ಮನೋರಮಾ ಮಧ್ವರಾಜ್.—ಪರಿಶೀಲಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಒಟ್ಟು ೩೪೬ ವೈದ್ಯರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದೀರಿ, ಅದರಲ್ಲಿ ಧಾರವಾಡ ಜಿಲ್ಲೆಯಲ್ಲಿ ೧೭ ಖಾಲಿ ಇದೆ, ನನ್ನ ತಾಲ್ಲೂಕಿನಲ್ಲಿ ೫ ವೈದ್ಯರ ಹುದ್ದೆ ಖಾಲಿ ಇದೆ. ನನ್ನ ತಾಲ್ಲೂಕಿನಲ್ಲಿರತಕ್ಕ ಖಾಲಿ ಜಾಗಗಳಿಗೆ ವೈದ್ಯರುಗಳನ್ನು ಕೂಡಲೇ ಭರ್ತಿ ಮಾಡಬೇಕೆಂದು ಕೇಳಿದೆ, ಇಂಥವರನ್ನೇ ಹಾಕಿ ಎಂದು ನಾನು ಕೇಳಿಲ್ಲ. ಆದರೆ, ಸರ್ಕಾರದವರು ಹಿರೇಕೆರೂರು ತಾಲ್ಲೂಕಿಗೆ ಖಾಲಿ ಇರತಕ್ಕ ಜಾಗಗಳನ್ನು ತುಂಬುವ ಬದಲಿಗೆ ಇರತಕ್ಕ ವೈದ್ಯರುಗಳಲ್ಲಿ ಮೂರು ಜನರನ್ನು ವರ್ಗ ಮಾಡಿ, ಖಾಲಿ ವೈದ್ಯರ ಹುದ್ದೆಗಳು ೮ ಇರುವಂತೆ ಮಾಡಿದ್ದಾರೆ. ನಮ್ಮ ತಾಲ್ಲೂಕಿನ ಬಗ್ಗೆ ಮಲತಾಯಿ ಧೋರಣೆ ಏತಕ್ಕೆ ? ಸರ್ಕಾರ ತೀವ್ರವಾಗಿ ಈ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.